ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ಸರ್ವ ಪಕ್ಷ ಸಭೆಯಲ್ಲಿ ಯಾರು ಏನೆಂದರು?

**ರಾಜ್ಯಪಾಲ ವಜುಭಾಯ್ ವಾಲಾ ನೇತೃತ್ವದಲ್ಲಿ ಮಂಗಳವಾರ ಸಂಜೆ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಕೊರೊನಾ 2ನೇ ಅಲೆ ಹೆಚ್ಚಳದ ಬಗ್ಗೆ ತೀವ್ರ ಆತಂಕ ವ್ಯಕ್ತವಾಯಿತು. ಕೊರೊನಾ ನಿರ್ವಹಣೆ ವಿಚಾರದಲ್ಲಿ ಸರ್ಕಾರ ಎಡವಿದೆ ಎಂದು ಪ್ರತಿಪಕ್ಷ ನಾಯಕರು ಆರೋಪಿಸಿದರೂ, ಲಾಕ್‌ಡೌನ್ ಸೇರಿ ಇತರೆ ಕಠಿಣ ಕ್ರಮಗಳ ಜಾರಿಗೆ ಬೆಂಬಲ ನೀಡಿದರು.**

## ಲಾಕ್‌ಡೌನ್ ಅನಿವಾರ್ಯ

ಆರೋಗ್ಯ ಸಚಿವರು ಮಂಡಿಸಿರುವ ಅಂಕಿ-ಅಂಶಗಳ ಬಗ್ಗೆ ಮಾತನಾಡುವುದಿಲ್ಲ, ನವೆಂಬರ್‌ನಲ್ಲೇ ತಾಂತ್ರಿಕ ಸಮಿತಿಯ ವೈದ್ಯರು ಎರಡನೇ ಹಂತದ ಕೊರೊನಾ ಅಲೆ ವೇಗವಾಗಿ ಹರಡುತ್ತದೆ ಎಂದು ಸರ್ಕಾರದ ಗಮನಕ್ಕೆ ತಂದರು. ಎಲ್ಲೋ ಒಂದು ಕಡೆ ಮೈ ಮರೆತೆವು ಎಂಬ ಬಗ್ಗೆ ನೋವು ಇದೆ.



ಬೆಂಗಳೂರು, ಕಲಬುರಗಿ, ಮೈಸೂರು, ಬೀದರ್, ತುಮಕೂರು ಸೇರಿ ದೊಡ್ಡ ನಗರಗಳಲ್ಲಿ ಲಾಕ್‌ಡೌನ್ ಮಾಡಿ. ಮಹಾರಾಷ್ಟ್ರ ಸೇರಿ ಬೇರೆ ರಾಜ್ಯಗಳಿಂದ ಬರುವವರಿಗೆ ನಿಯಂತ್ರಣ ಮಾಡಿ. ರಾಜ್ಯ ಸರ್ಕಾರ ದಿವಾಳಿಯಾಗಿಲ್ಲ, ರಾಜ್ಯದ ಜನತೆ ಸರ್ಕಾರಕ್ಕೆ ಶಕ್ತಿ ತುಂಬುತ್ತಾರೆ. ಲಾಕ್‌ಡೌನ್ ಅನಿವಾರ್ಯ.

ತಕ್ಷಣ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಲಾಕ್‌ಡೌನ್ ತಕ್ಷಣ ಆಗಬೇಕು. ಅದರ ಜತೆಯಲ್ಲಿ ಕಾರ್ಮಿಕರು, ಆಟೋ, ಟ್ಯಾಕ್ಸಿ ಚಾಲಕರು, ಕೂಲಿ ಕೆಲಸಕ್ಕೆ ಹೋಗುವವರಿಗೆ ಸರ್ಕಾರವೇ 10 ಸಾವಿರ ಅಥವಾ 20 ಸಾವಿರ ರೂ. ಕೊಡಿ. ಸರ್ಕಾರದ ಯೋಜನೆ ಎಲ್ಲ ನಿಲ್ಲಿಸಿ, ಬಡವರಿಗೆ ತಿಂಗಳ ಮಟ್ಟಿಗೆ ಎಲ್ಲ ರೀತಿಯ ನೆರವು ಕೊಡಿ. ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ನೆರವು ನೀಡಿ ಎಂದು ತಿಳಿಸಿದರು. ಸ್ಮಶಾನ ನಿರ್ಮಾಣ ಮಾಡುವುದು ಬೇರೆ, ಸ್ಮಶಾನಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳುವುದು ಮುಖ್ಯ. ಸರ್ಕಾರ ಕೈಗೊಳ್ಳುವ ಎಲ್ಲ ರೀತಿಯ ಕ್ರಮಗಳಿಗೂ ನಮ್ಮ ಬೆಂಬಲ ಇದೆ.

## ಈ ಸಭೆಯೇ ಸಂವಿಧಾನ ಬಾಹಿರ

ಕೊರೊನಾ ಎರಡನೇ ಅಲೆ ಬರುವ ಮಾಹಿತಿ ಇದ್ದರೂ ಸರ್ಕಾರ ಇಲ್ಲಿಯವರೆಗೆ ಸರ್ವಪಕ್ಷ ಸಭೆ ಕರೆಯದೇ ಇದ್ದದ್ದು ಅಭಿಪ್ರಾಯ ಸಲಹೆ ಸೂಚನೆ ಪಡೆಯದಿರುವುದು ತಪ್ಪು. ನವೆಂಬರ್ 30ರಂದು ತಜ್ಞರು ವರದಿ ಕೊಟ್ಟು ಜನವರಿ ಫೆಬ್ರವರಿಯಲ್ಲಿ ಕೊರೊನಾ ಎರಡನೇ ಅಲೆ ಬರುತ್ತದೆ ಎಂದು ಹೇಳಿದ್ದರು. ಆ ವರದಿ ನಂತರ



ವಾದರೂ ಎಚ್ಚರವಹಿಸಬೇಕಾಗಿತ್ತು. ಕೂಡಲೇ ಸರ್ವಪಕ್ಷ ಸಭೆ ಕರೆಯ ಬೇಕಾಗಿತ್ತು. ಸುರೇಶ್‌ಕುಮಾರ್ ಅವರ ಆಪ್ತ ಸಹಾಯಕ ಆಕ್ಸಿಜನ್ ಇಲ್ಲದೆ ಮೃತ ಪಟ್ಟರು ಎಂದು ವರದಿಯಾಗಿದೆ. ಹೆಲ್ತ್ ಎಮರ್ಜೆನ್ಸಿ ಎಂದು ಘೋಷಿಸಿ. ಇದು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುವುದು ಅತ್ಯಂತ ಅವಶ್ಯಕ.

ರಾಜ್ಯಪಾಲರು ಈ ಸಭೆಯನ್ನು ಕರೆದಿರುವುದು ಸಂವಿಧಾನ ಬಾಹಿರ. ರಾಜ್ಯಪಾಲರಿಗೆ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಸಂವಿಧಾನದಲ್ಲಿ ಕೊಟ್ಟಿಲ್ಲ, ಹಾಗಾಗಿ, ಈ ಸಭೆಗೆ ನನ್ನ ಸಂವಿಧಾನಾತ್ಮಕ ತಕರಾರು ಇದೆ. ರಾಜ್ಯಪಾಲರು ಸಭೆ ಕರೆದಿರುವುದರಿಂದ ಅವರಿಗೆ ಗೌರವ ಕೊಡಲು ಭಾಗವಹಿಸಿದ್ದೇನೆ.

ಯಡಿಯೂರಪ್ಪ ಅವರು ಇದರ ಬಗ್ಗೆ ಅಡ್ವೋಕೇಟ್ ಜನರಲ್ ಅವರಿಂದ ಅಭಿಪ್ರಾಯ ಪಡೆದಿದ್ದಾರೋ ಇಲ್ಲವೋ ಗೊತ್ತಿಲ್ಲ, ನನಗಿರುವ ಸಂವಿಧಾನ ಜ್ಞಾನದ ಪ್ರಕಾರ ಈ ಸಭೆ ಸಂವಿಧಾನ ಬಾಹಿರ. ಈ ಸಭೆಯ ಆಧಾರದ ಮೇಲೆ ರಾಜ್ಯಪಾಲರು ಯಾವುದೇ ಕ್ರಮ ಕೈಗೊಳ್ಳಲು ಆಗುವುದಿಲ್ಲ, ರಾಜ್ಯದ ಸಚಿವ ಸಂಪುಟ ಕೈಗೊಳ್ಳಬೇಕಿರುವ ಕ್ರಮ. ಹೀಗಾಗಿ, ಸರ್ಕಾರವೇ ಇಲ್ಲಿ ಮುಖ್ಯ.

## ಸರ್ಕಾರ ವೈಫಲ್ಯ ಒಪ್ಪಿಕೊಳ್ಳಲಿ

ಕೊರೊನಾ ನಿಯಂತ್ರಣ ವಿಚಾರದಲ್ಲಿ ಆರೋಗ್ಯ ಸಚಿವರ ಮಾಹಿತಿ ವಾಸ್ತವಕ್ಕೆ ದೂರ. ಸರ್ಕಾರ ತನ್ನ ವೈಫಲ್ಯ ಒಪ್ಪಿಕೊಳ್ಳಬೇಕು, ಪ್ರತಿಷ್ಠೆಯಾಗಿ ಪರಿಗಣಿಸಬಾರದು. ತಾಂತ್ರಿಕ ಸಮಿತಿ ಎಚ್ಚರಿಕೆ ನೀಡಿದ್ದರೂ ಸರಿಯಾಗಿ ಪಾಲಿಸಿಲ್ಲ, ನಾನು ಈ ವಿಚಾರದಲ್ಲಿ ರಾಜಕೀಯ



ಮಾಡುವುದಿಲ್ಲ, ಜನರಲ್ಲಿ ಆತಂಕ ಮೂಡಿದ್ದು ಧೈರ್ಯ ತುಂಬುವ ಕೆಲಸ ಮಾಡಿ.

ಹಾಸಿಗೆ, ರೋಗಿಗಳ ಪರಿಸ್ಥಿತಿ ಬಗ್ಗೆ ರಿಯಾಲಿಟಿ ಚೆಕ್ ಮಾಡಿ ನಾಲ್ಕು ಸಚಿವರು ಮಾತ್ರ ಸರ್ಕಾರ ಅಲ್ಲ, ಯಾರೇ ಮೃತಪಟ್ಟರೆ ಗೌರವಯುತವಾಗಿ ಅಂತ್ಯಕ್ರಿಯೆ ಮಾಡಿ ಆತ್ಮಕ್ಕೆ ಶಾಂತಿ ಸಿಗಬೇಕು ಎನ್ನುತ್ತೇವೆ. ಆದರೆ, ಈಗ ಆಗುತ್ತಿರುವುದು ಏನು? ಸರ್ಕಾರಕ್ಕೆ ಕನಿಷ್ಠ ಪರಿಜ್ಞಾನವೂ ಇಲ್ಲದಾಗಿದೆ.

ಸರ್ಕಾರ ಅಭಿವೃದ್ಧಿ ಕಾರ್ಯ ನಿಲ್ಲಿಸಲಿ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಗಮನ ನೀಡಲಿ. ಶಿಕ್ಷಣ ಸರಸ್ವತಿ ಮಕ್ಕಳು, ಪೋಷಕರು ಎಲ್ಲರ ಹಿತ ಕಾಪಾಡುವ ನಿರ್ಧಾರ ಕೈಗೊಳ್ಳಿ, ಪರೀಕ್ಷೆ ನಡೆಸುವ ವಿಚಾರದಲ್ಲಿ ಪರಿಸ್ಥಿತಿ ಅರಿತು ನಿರ್ಧಾರ ಕೈಗೊಳ್ಳಿ. ಮುಖ್ಯಮಂತ್ರಿಗಳ ಅನಾರೋಗ್ಯ ಪರಿಸ್ಥಿತಿಯಲ್ಲಿ ರಾಜ್ಯಪಾಲರು ಮಧ್ಯಪ್ರವೇಶ ಮಾಡಿ ಸಭೆ ಕರೆದಿರುವುದು ಸ್ವಾಗತಾರ್ಹ. ಆದರೆ ಅವರಿಗೆ ಅಧಿಕಾರ ಇದೆಯೋ ಇಲ್ಲವೋ ಬೇರೆ ವಿಚಾರ. ಅವರ ಕಾಳಜಿ ಮೆಚ್ಚುತ್ತೇನೆ.

**ಆರೋಗ್ಯಪೂರ್ಣ ಕರ್ನಾಟಕ ನಮ್ಮ ಆದ್ಯತೆಯಾಗಬೇಕು. ನಾವು ಸವಾಲು ಎದುರಿಸಬೇಕಾಗಿದೆ. ಯಾವುದೇ ರೀತಿಯ ಕಠಿಣ ಕ್ರಮ ಕೈಗೊಳ್ಳಿ. ಲಾಕ್‌ಡೌನ್ ಮಾಡುವುದಾದರೆ ಮಾಡಿ. ರಾಜ್ಯದ ಜನರು ಸಹಕಾರ ಕೊಡಬೇಕಾಗಿದೆ.**

• **ವಜುಭಾಯ್ ವಾಲಾ**, ರಾಜ್ಯಪಾಲರು

**ಒಂದು ಕಡೆ ಬಡವರನ್ನು ಕಾಪಾಡಬೇಕು, ಮತ್ತೊಂದೆಡೆ ಕೋವಿಡ್‌ನಿಂದ ಪಾರಾಗಬೇಕು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ ನಿಲುವಿಗೆ ಜನರೂ ಸಹಕಾರ ಕೊಡಬೇಕು.**

• **ಆರ್. ಅಶೋಕ್**, ಕಂದಾಯ ಸಚಿವ

**ರಾಜ್ಯಪಾಲರು ಸಭೆ ಕರೆದಿರುವುದು ಸಂವಿಧಾನ ಬಾಹಿರ ಅಲ್ಲ. ರಾಜ್ಯದ ಮುಖ್ಯಸ್ಥರಾಗಿ ಅವರು ಸಭೆ ಕರೆದಿದ್ದಾರೆ. ಒಳ್ಳೆಯ ಕೆಲಸ ಮಾಡಿದರೆ ಸಂವಿಧಾನ ಬಾಹಿರ ಹೇಗಾಗುತ್ತದೆ? ರಾಜ್ಯಪಾಲರ ಕ್ರಮವನ್ನು ಸ್ವಾಗತಿಸುತ್ತೇನೆ.**

• **ಬಸವರಾಜ ಹೊರಟ್ಟಿ**, ಸಭಾಪತಿ